## ಕೇಶ ವಿನ್ಯಾಸ ನೋಡಲು ಖುಷಿ

ಕ್ರಿಕೆಟ್ ಆಟಗಾರರ ವಿಶೇಷ ಕೇಶ ವಿನ್ಯಾಸಗಳನ್ನು ಹದಿಹರೆಯದ ಕ್ರಿಕೆಟ್ ಅಭಿಮಾನಿಗಳೂ ಅನುಕರಿಸಿ ಮಿಂಚುತ್ತಿದ್ದಾರೆ. ಶ್ರೀಲಂಕಾದ ಬೌಲರ್ ಲಸಿತ್ ಮಾಲಿಂಗರ ಬಣ್ಣ ಬಣ್ಣದ ತಲೆಗೂದಲು, ವೆಸ್ಟ್ ಇಂಡೀಸ್ ಆಲ್ ರೌಂಡರ್ ಆ್ಯಂಡ್ರೂ ರಸೆಲ್ ಅವರ ಬಿಳಿ ಕೋರೆಯಂತಹ ತುದಿಗೂದಲು, ನಮ್ಮ ಮಹೇಂದ್ರ ಸಿಂಗ್ ಧೋನಿ ಕುತ್ತಿಗೆ ಹಿಂದೆ ಇಳಿ ಬಿಟ್ಟ ಕೇಶ ರಾಶಿ, ವಿರಾಟ್ ಕೊಹ್ಲಿ ಅವರ ವಿಶೇಷ ಕೇಶ ವಿನ್ಯಾಸ (ಹೆಚ್ಚಿನವರು ಇದನ್ನು ಅನುಕರಿಸಿದ್ದಾರೆ!) ಕ್ರಿಕೆಟ್‌ಪ್ರಿಯರ ಗಮನಸೆಳೆದಿವೆ. ಈ ಬಾರಿಯ ಐಪಿಎಲ್ ನಲ್ಲಿ ರಾಜಸ್ಥಾನ್ ರಾಯಲ್ಸ್‌ನ ವೇಗದ ಬೌಲರ್ ಜೋಫ್ರಾ ಆರ್ಚರ್ (ಇಂಗ್ಲೆಂಡ್ ಆಟಗಾರ) ತಮ್ಮ ತಲೆಗೂದಲನ್ನು ಹೇರ್ ಪಿನ್ ಕರ್ವ್ ತರಹ ವಿನ್ಯಾಸ ಮಾಡಿಸಿ ಕುತ್ತಿಗೆಯ ಹಿಂದೆ ಮಣಿಯ ಕಟ್ಟಿನ ಅಲಂಕಾರ (ಲೋಲಕ್ ತರಹ) ಮಾಡಿದ್ದಾರೆ. ಅವರು ಬೌಲ್ ಮಾಡಲು ಓಡಿ ಬರುವುದನ್ನು ನೋಡಲು ಚೆಂದ! ವೀಕ್ಷಕರು ಸುಮ್ಮನಿರುತ್ತಾರಾ? ಮಾರನೇ ದಿನವೇ ಸಲೂನಿಗೆ ಹೋಗಿ ತಾವು ಸೆರೆ ಹಿಡಿದ ಚಿತ್ರ ತೋರಿಸಿ ಅದೇ ವಿನ್ಯಾಸದ ಕಟಿಂಗ್ ಮಾಡಿಸಿಕೊಳ್ಳುತ್ತಾರೆ; ಮಾರನೇ ದಿನವೇ ಪ್ರೇಕ್ಷಕರ ಗ್ಯಾಲರಿಯಲ್ಲಿ ಗಮನ ಸೆಳೆಯುತ್ತಾರೆ. ಕ್ರಿಕೆಟ್ ನೆಪದಲ್ಲಿ ಏನೆಲ್ಲಾ ಹೊಸ ಹೊಸ ಬದಲಾವಣೆಗಳು. ಟೀವಿಗಳಲ್ಲಿ ನೋಡಿ ಖುಷಿಪಡುವುದೇ ಮಜಾ!

—ನಗರ ಗುರುದೇವ್ ಭಂಡಾರ್ಕರ್, ಹೊಸನಗರ

## ಕುಡಿತದ ಮೋಜು ಮನರಂಜನೆಯಲ್ಲ

ಝೀ ಕನ್ನಡದ 'ಬ್ರಹ್ಮಗಂಟು' ಧಾರಾವಾಹಿಯ ಇತ್ತೀಚಿನ ಕಂತಿನಲ್ಲಿ ನರಸಿಂಹ ಹಾಗೂ ಪೊಲೀಸ್ ಅಧಿಕಾರಿಯ ಪುತ್ರಿ ಸಂಜನಾ ಇಬ್ಬರೂ ಕುಡಿದು ಕುಣಿಯುವ ಸನ್ನಿವೇಶ ಸರಿ ಅನ್ನಿಸಲಿಲ್ಲ. ಯುವಕರಿಗೆ ಸಕಾರಾತ್ಮಕ ಸಂದೇಶ ನೀಡುವಂತಹ ಪಾತ್ರಗಳನ್ನು ಚಿತ್ರಿಸಿದರೆ ಒಳ್ಳೆಯದು.

—ಕಮಲಾ ರಾವ್, ಬೆಂಗಳೂರು

ವಾರದ ಪತ್ರ

## ರಚನಾತ್ಮಕ ಬದಲಾವಣೆ ಆಗಲಿ

ಚಂದನ ವಾಹಿನಿಯಲ್ಲಿ ಪ್ರಸಾರವಾಗುವ 'ಥಟ್ ಅಂತ ಹೇಳಿ' ಕಾರ್ಯಕ್ರಮವನ್ನು ಜನರ ನಡುವೆ ರೂಪಿಸಲು ಒಂದು ಸಲಹೆ. ರಾಜ್ಯದ ಗ್ರಾಮಗಳಿಗೆ ಭೇಟಿ ನೀಡಿ ಅಲ್ಲಿನ ಸರ್ಕಾರಿ ಶಾಲೆಯ ಮಕ್ಕಳೊಟ್ಟಿಗೆ ಈ ಕಾರ್ಯಕ್ರಮ ಮಾಡಬೇಕು. ಇದರಿಂದ ಅಲ್ಲಿನ ಶಾಲೆಗಳ ಸ್ಥಿತಿಗತಿ ಬಗ್ಗೆ ಮಾಹಿತಿ ನೀಡಬಹುದು. ಮಾತ್ರವಲ್ಲದೆ, ಶಾಲೆಯಿಂದ ವಿಮುಖರಾಗುವ ಮಕ್ಕಳ ಸಂಖ್ಯೆಯನ್ನು ಕಡಿಮೆಗೊಳಿಸಬಹುದು. ಅವರಿಗೆ ವಿದ್ಯಾಭ್ಯಾಸದ ಬಗ್ಗೆ ಹುರುಪು ತುಂಬಿಸಬಹುದು. ಬಹುಮಾನವಾಗಿ ನೀಡುವ ಪುಸ್ತಕಗಳಿಂದ ಮಕ್ಕಳಿಗೆ ಓದುವ ಹವ್ಯಾಸವನ್ನು, ಓದಿನತ್ತ ಆಸಕ್ತಿಯನ್ನೂ ವೃದ್ಧಿಸಲು ಸಾಧ್ಯವಾಗಬಹುದು. ಗ್ರಾಮೀಣ ಭಾಗದ ಸರ್ಕಾರಿ ಶಾಲೆಯ ಅಧ್ಯಾಪಕರು ಇಂತಹ ಕಾರ್ಯಕ್ರಮಗಳಲ್ಲಿ ಭಾಗವಹಿಸುವ ಅವಕಾಶ ಕಲ್ಪಿಸಿದರೆ ಅದರ ಸಕಾರಾತ್ಮಕ ಪ್ರಭಾವ ಮಕ್ಕಳ ಮೇಲೆ ಉಂಟಾಗಬಹುದು.

—ರಾಜೀವ್ ಮಾಗಲ್, ಸಕಲೇಶಪುರ

## ಉಲ್ಲಾಸ ತಂದ ಹಾಸ್ಯ

ಉದಯ ಕಾಮಿಡಿ ವಾಹಿನಿಯ ವಾರ್ಷಿಕೋತ್ಸವದ ಸಂದರ್ಭದಲ್ಲಿ ಹಾಸ್ಯೋತ್ಸವ ನಡೆಯುತ್ತಿದ್ದರಿಂದ ಹಾಸ್ಯ ದಿಗ್ಗಜರ ಸಿನಿಮಾ ದೃಶ್ಯಗಳು ನಕ್ಕು ನಗಿಸಿದವು. ಕಲಾವಿದರಾದ ನರಸಿಂಹರಾಜು, ಬಾಲಕೃಷ್ಣ, ದ್ವಾರಕೀಶ್, ಮುಸುರಿ, ಎನ್.ಎಸ್. ರಾವ್, ಜಗ್ಗೇಶ್, ಸಾಧುಕೋಕಿಲ, ಕೋಮಲ್, ಮುಖ್ಯಮಂತ್ರಿ ಚಂದ್ರು, ಉಮಾಶ್ರೀ ಮೊದಲಾದವರ ಹಾಸ್ಯ ದೃಶ್ಯ ಹಾಗೂ ಅಭಿನಯ ಮನಸ್ಸನ್ನು ಹಗುರ ಮಾಡಿತು.

—ಗಂಗಾಧರ್, ಬೆಂಗಳೂರು

## 'ಮಣಿ' ಗೆಳತಿಗೆ ಮಿಡಿದ ಶಿವಣ್ಣ



ಝೀ ಕನ್ನಡದ 'ಸರಿಗಮಪ'ದಲ್ಲಿ ಶಿವರಾಜಕುಮಾರ್, ಪತ್ನಿ ಮತ್ತು ಮಗಳ ಜೊತೆ ಆಗಮಿಸಿದ್ದು ವಿಶೇಷವಾಗಿತ್ತು. ಗಾಯಕರು ಶಿವಣ್ಣ ಅಭಿನಯದ ಹಾಡುಗಳನ್ನು ಹಾಡಿ ರಂಜಿಸಿದರು. 'ಜನುಮದ ಜೋಡಿ' ಚಿತ್ರದ ಇವನ್ಯಾರ ಮಗನೊ ಹಿಂಗವನಲ್ಲ... ಹಾಡಿಗೆ ಭೂಮಿಕಾ ಹಾಡುತ್ತ ಹೆಜ್ಜೆ ಹಾಕಿದ್ದು ಪ್ರೇಕ್ಷಕರನ್ನು ಮೋಡಿಮಾಡಿತು. ಶಿವಣ್ಣನವರ ಉತ್ಸಾಹ, ವ್ಯಕ್ತಿತ್ವ, ವಿನಯ ಮೆಚ್ಚುಗೆಯಾಯಿತು.

—ಭಾರತೀ ಗಂಗಾಧರ್, ಬೆಂಗಳೂರು

ಝೀ ಕನ್ನಡದ 'ಸರಿಗಮಪ'ದಲ್ಲಿ ಶಿವರಾಜೋತ್ಸವ ಅದ್ಭುತವಾಗಿ ಮೂಡಿಬಂತು. ಚಿಕಿತ್ಸೆ ಪಡೆದು ಮರಳಿದ ಶಿವಣ್ಣ, ಅದ್ಭುತ ಚೈತನ್ಯದಿಂದ ವೇದಿಕೆಯ ಮೇಲೆ ಹಾಡಿದ್ದು ಕುಣಿದದ್ದು ನೋಡಿ ಮನಸ್ಸಿಗೆ ತುಂಬಾ ಸಂತೋಷವಾಯಿತು. ಅವರು ಅನೇಕ ಅನಾರೋಗ್ಯಪೀಡಿತರಿಗೂ ಸ್ಫೂರ್ತಿಯಾಗಿದ್ದಾರೆ.

—ಅನ್ನಪೂರ್ಣಮ್ಮ, ಬೆಂಗಳೂರು

## ಪರಸ್ಪರ ಗೌರವ ಅನುಕರಣೀಯ

ಜಾಣರ ಪೆಟ್ಟಿಗೆಯಲ್ಲಿ ಹೆಂಡತಿಯನ್ನು ಬಹುವಚನದಲ್ಲಿ ಸಂಬೋಧಿಸುವುದನ್ನು ಕೇಳಲು ಮುಜುಗರವಾಗುತ್ತದೆ ಎನ್ನುವಂತೆ ವೀಕ್ಷಕರೊಬ್ಬರು ಪತ್ರ ಬರೆದಿದ್ದಾರೆ. ಹಾಗೆಂದು ಭಾವಿಸಬೇಕಿಲ್ಲ. ಖ್ಯಾತ ಲೇಖಕಿ ಡಾ. ಅನುಪಮಾ ಮತ್ತು ಅವರ ಪತಿ ನಿರಂಜನ ಬಹುವಚನದಲ್ಲಿಯೇ ಮಾತನಾಡುತ್ತಿದ್ದರು. ಈ ರೀತಿಯ ಹಲವು ನಿದರ್ಶನಗಳು ನಮ್ಮ ನಡುವೆ ಇವೆ. ಅವು ಅನುಕರಣೀಯ.

—ಎನ್.ಡಿ. ವೆಂಕಟಸುಬ್ಬು

## ಕಪಾಲಮೋಕ್ಷ ಹಾಸ್ಯವೇ?

ಕಲರ್ಸ್ ಕನ್ನಡ ವಾಹಿನಿಯ 'ಯಜಮಾನ' ಧಾರಾವಾಹಿಯಲ್ಲಿ ರಾಯ್ ಕೆನ್ನೆಗೆ ಸಂಪಂಗಿ ಪದೇ ಪದೇ ಹೊಡೆಯುವುದು ಅತಿಯೆನ್ನಿಸುತ್ತದೆ. ಹಾಸ್ಯದ ನೆಪದಲ್ಲಿ ಇಂಥ ಅತಿರೇಕಗಳೇಕೆ?

—ಶೋಭ, ಬೆಂಗಳೂರು

## ಹವಾಮಾನಕ್ಕೆ ತಕ್ಕಂತೆ ಉಡುಪಿರಲಿ

ಝೀ ಕನ್ನಡದ 'ಪುಟ್ಟಕ್ಕನ ಮಕ್ಕಳು' ನಿರ್ದೇಶಕರಿಗೆ ಒಂದು ಸೂಚನೆ. ಈಗ ಬೇಸಿಗೆಯ ಬೇಗೆಯಲ್ಲಿ ಜೀವ ಬೆಂದು ಹೋಗುತ್ತಿದೆ. ಇಂತಹ ಧಗೆಯ ಹವೆಯಲ್ಲೂ ಗಂಗಾಧರಪ್ಪನಿಗೆ ಮಂಕಿಕ್ಯಾಪ್, ಸ್ವೆಟರ್ ಹಾಕುವ ಶಿಕ್ಷೆ ಏಕೆ? ಅಥವಾ ಅವನಿಗೆ ವಿಶೇಷ ತೊಂದರೆ ಏನಾದರೂ ಇದೆಯೇ?

—ರಚಿತಾ ಸುರೇಶ್

## ಪ್ರೇಕ್ಷಕ ಮೂರ್ಖನಲ್ಲ

ಝೀ ಕನ್ನಡದ 'ಶ್ರಾವಣಿ ಸುಬ್ರಹ್ಮಣ್ಯ'ದಲ್ಲಿ ಸಬ್ ರಿಜಿಸ್ಟರ್ ಆಫೀಸಿನಲ್ಲಿಯೇ ಮ್ಯಾರೇಜ್ ಸರ್ಟಿಫಿಕೇಟ್ ಕೇಳಿದಾಗ ಶ್ರಾವಣಿ ವಿಮಾ ಕಂಪನಿ ದಾಖಲೆಗಳ ರಾಶಿಯ ನಡುವೆ ಸಹಿ ಹಾಕಿಸಿದ್ದನ್ನು ಕೊಡುತ್ತಾಳೆ. ಇದು ಹೇಗೆ ಸಾಧ್ಯ? ವಿವಾಹದ ದಾಖಲೆ ಉಪನೋಂದಣಿ ಅಧಿಕಾರಿಗಳ ಮುಂದೆ ಆಗಬೇಕಲ್ಲವೇ? ಆ ದಾಖಲೆ ಮನೆಯಲ್ಲಿ ಹೇಗೆ ಇರುತ್ತದೆ?

—ಅರುಣ್ ನಂದಾವರ